ಪ್ರವಾಸಿಗರ ಮನೋಲ್ಲಾಸಕ್ಕೆ ಮಾತ್ರವಲ್ಲದೆ ಕರ್ನಾಟಕ ರಾಜ್ಯದ ಇತಿಹಾಸವನ್ನು ಬಿಂಬಿಸುವ ಸ್ಥಳವಾಗಿದೆ. ಆದರೆ ಈ ಪಟ್ಟಣವು ಅಲ್ಲಿನ ಪುರಸಭೆಯ ಹದಗೆಟ್ಟ ಆಡಳಿತ ವ್ಯವಸ್ಥೆಯಿಂದ ಗೊತ್ತು ಗುರಿ ಇಲ್ಲದೆ ಪಾಸಸೋ ಇಚ್ಛೆಯಾಗಿ ಬಡವರ ಹೆಸರಿನಲ್ಲಿ ಕೋಟಿ ಅವರಣ ಮತ್ತಿತರ ಸಾರ್ವಜನಿಕರ ಸ್ಥಳಗಳು ಮತ್ತಿತರ ಪವಿತ್ರ ಸ್ಥಳದಲ್ಲಿ ಪೆಡ್ಡುಗಳನ್ನು ಹಾಕಿಕೊಳ್ಳಲು ಅವಕಾಶ ನೀಡಲಾಗಿದೆ. ಇದು ಅಕ್ರಮವೆಂದು, ಇದು ಸರಿಯಲ್ಲವೆಂದು ಹೀಗೆ ಮಾಡಬಾರದೆಂದು ಪುರಸಭೆಯ ವಿರೋಧಿ ಸದಸ್ಯರು ಪಟ್ಟಣದ ನಾಗರೀಕರು ಮಾಡಿದ ಮನವಿಗೆ ಬೆಲೆ ಬಂದಿಲ್ಲ.

ಪುರಸಭೆಯ ಆಡಳಿತ ಅವಧಿ ಮುಗಿಯಿತು, ಮಂದೆಯಾದರೂ ಈ ರೀತಿ ಆಗುವುದಿಲ್ಲ ಎಂದು ತಿಳಿದಿದ್ದ ಪುರಸಭೆ ವಿರೋಧಿ ಸದಸ್ಯರಿಗೆ ಮತ್ತು ನಾಗರೀಕರಿಗೆ ಪುರಸಭೆ ಆಡಳಿತ ಅವಧಿ ವಿಸ್ತರಣೆಯಿಂದ ಮತ್ತೆ ಉಸಿರು ಕಟ್ಟಿದಂತಾಗಿದೆ. ಪುರಸಭೆಯ ಆಡಳಿತ ಅವಧಿ ವಿಸ್ತರಣೆ ಮಾಡಿರುವ ಈ ಸಂದರ್ಭದಲ್ಲಿ ಇಲ್ಲಿ ಇನ್ನೂ ಅವ್ಯವಹಾರಗಳು ನಡೆಯಲು ದಾರಿಯಾಗಿದೆ. ಈ ವಿಚಾರವನ್ನು ತಿಳಿದ ಇಲ್ಲಿನ ನಾಗರಿಕರು ಮತ್ತು ಪ್ರವಾಸಿರು ನಗರದ ಬಗ್ಗೆ ಕಳಕಳಿ ಹೊಂದಿರುವವರು ಪುರಸಭೆ ಆಡಳಿತ ಅವಧಿ ವಿಸ್ತರಣೆ ಮಾಡಿರುವುದನ್ನು ಪ್ರತಿಭಟಿಸಿ ಚುನಾವಣೆಯಾಗುವವರೆಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಕೋರಿ ಸಂಬಂಧಿಸಿದ ಎಲ್ಲರಿಗೂ ಸರ್ಕಾರಕ್ಕೂ ಮನವಿ ಮಾಡಿದ್ದಾರೆ. ಚುನಾವಣೆವರೆಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ಎಂಬ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. ಮತ್ತು ಆಡಳಿತಾಧಿಕಾರಿಗಳನ್ನು ನೇಮಿಸಲು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.— ಅಧ್ಯಕ್ಷರೇ, ಮಾನ್ಯ ಸಚಿವರು ವಿದೇಶ ಪ್ರಯಾಣ ಕೈಗೊಂಡಿದ್ದಾರೆ. ಅವರು ಬಂದತಕ್ಷಣ ಇದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

೪) ಕರ್ನಾಟಕ ಸರ್ಕಾರ ಸಚಿವಾಲಯದ ಉಪಹಾರ ಮಂದಿರದ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವುದರ ಬಗ್ಗೆ

ಶ್ರೀ ಜಿ. ನಾರಾಯಣ ಕುಮಾರ್.— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರ ಸಚಿವಾಲಯದ ಇಲಾಖಾ ಉಪಹಾರ ಮಂದಿರವನ್ನು ಕಳಿದ ೧೨ ವರ್ಷಗಳಿಂದಲೂ ಸರ್ಕಾರವೇ ನಡೆಸುತ್ತಿದ್ದರೂ ಕೂಡ ಸದರಿ ಉಪಹಾರ ಮಂದಿರದಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಮಹಾರಾಷ್ಟ್ರದಲ್ಲಿ ಹಾಗೂ ನಮ್ಮ ರಾಜ್ಯದ ಅತಿಥಿ ಗೃಹ ದೆಹಲಿಯ ಕರ್ನಾಟಕ ಭವನ ರಾಜ್ಯದ ಶಿಷ್ಟಾಚಾರ ಸಂಸ್ಥೆಗಳಲ್ಲಿ (ಸಾಸ್ಟಿಟಾಲಿಟಿ ಆರ್ಗನೈಸೇಷನ್) ಕೆಲಸ ಮಾಡುತ್ತಿರುವ ನೌಕರರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸುವಂತೆ ಮೇಲ್ಕಂಡ ನೌಕರರನ್ನೂ ಸರ್ಕಾರಿ ನೌಕರರನ್ನಾಗಿ ಪರಿಗಣಿಸದಿರುವುದರಿಂದ ಸದರಿ ನೌಕರರಿಗೆ ಬಹಳ ತೊಂದರೆಯಾಗುತ್ತಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಂ. ರಘುಪತಿ.— ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಸೂಕ್ತಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತಿದ್ದೇನೆ.

೫) ಹೊಸದುರ್ಗ ತಾಲ್ಲೂಕ್ ಮತ್ತೋಡು ಗ್ರಾಮ ಪಂಚಾಯಿತಿಗೆ ಸಿಮೆಂಟ್ ಕಂಪನಿಯವರಿಂದ ಹಣ ಸಂದಾಯ ಮಾಡುವುದರ ಬಗ್ಗೆ

ಶ್ರೀ ಜಿ. ರಾಮದಾಸ್.— ಹೊಸದುರ್ಗ ತಾಲ್ಲೂಕು ಮತ್ತೋಡು ಹೋಬಳಿಯಲ್ಲಿನ ಕೆ. ಎಂ. ಎಂ. ಸಿ. (ಗೋಕುಲ್) ಮತ್ತು ಲೋಕ್ ಅಂಡ್ ವಾಲಾ ಸಿಮೆಂಟ್ ಕಂಪನಿಯಿಂದ ೧೯೮೪ ರಲ್ಲಿ ರಾಜ್ಯ ಸರ್ಕಾರವು ಒಂದು ಅಗ್ರಿಮೆಂಟ್ ಮಾಡಿಕೊಂಡಿ ಅಲ್ಲಿನ ಪಂಚಾಯಿತಿಗೆ (ಮತ್ತೋಡು) ಪ್ರತಿವರ್ಷ ಕಂಪನಿಯ ಉತ್ಪಾದನೆಗೆ ತಕ್ಕಂತೆ ಇಂತಿಷ್ಟು ಹಣ ಕೊಡಬೇಕೆಂದು ನಿರ್ಧರಿಸಲಾಗಿತ್ತು. ಆದರೆ ಇದುವರೆಗೆ ಎರಡೂ ಕಂಪನಿಯಿಂದ ಮತ್ತೋಡು ಮಂಡಲ ಪಂಚಾಯಿತಿಗೆ ಹಣ ಸಂದಾಯವಾಗಿಲ್ಲ. ಉತ್ಪಾದನೆ ಪ್ರಾರಂಭದಿಂದ ೨ ಕಂಪನಿಗಳ ಬಾಬ್ತು ಈ ಮತ್ತೋಡು ಮಂಡಲ ಪಂಚಾಯಿತಿಗೆ ಬರಬೇಕಾಗಿರುವ ಬಾಕಿ ಹಣ ಎಷ್ಟು ಲಕ್ಷ ರೂಪಾಯಿಗಳು ಎಂಬುದು ನಿರ್ಧಾರವಾಗಬೇಕು. ಮತ್ತ